ವ್ಯವಸ್ಥೆ ಮಾಡಿದ್ದೀರಿ? ಹೇಗೆ ಹಿಡಿದಿರಿ? ಹೇಗೆ ಸಿಕ್ಕಿತು? ನಾಲ್ಕು ದಿವಸ ಅದರ ಆಹಾರ ಏನು? ಹೊರಗಡೆ ಹೋಗಬೇಕಾದರೆ ಆಹಾರ ಬೇಕಲ್ಲ. ಇವು ಒಂದಕ್ಕೊಂದು ಅನುಮಾನಾಸ್ಪದವಾದ ವಿಚಾರಗಳಾಗಿವೆ. ಇದು ಒಂದು ರೀತಿ ನಗು ಬರುತ್ತದೆ. ಇದರಲ್ಲಿ ನಗತಕ್ಕ ಪ್ರಶ್ನೆ ಇದೆ. ಆದರೆ ಇದರ ಹಿಂದೆ ಇರತಕ್ಕ ವಸ್ತು ಸ್ಥಿತಿ ಪ್ರತಿ ದಿನ ಮೃಗಾಲಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರಾಣಿಗಳು ಸಾಯುತ್ತಿವೆ. ಅದಕ್ಕೆ ಕಾರಣ, ಮಂತ್ರಿಗಳು ಕಾರಣ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವತ್ತು ಮಂತ್ರಿತಗಳು ಏನು ಹೇಳಿದರು ಎಂದರೆ ಹೆಬ್ಬಾವು ಮರೆ ಹತ್ತಿದೆ ಎಂದರು, ಹತ್ತಬಹುದು ಎಂದರು. ಮರದಿಂದ ಕೆಳಕ್ಕೆ ಇಳಿಯಿತೆ? ಅಥವಾ ಯಾವ ಮರ ಹತ್ತಿತ್ತು? ಅಲ್ಲಿ ಎಷ್ಟು ಮರಗಳು ಇವೆ? ಇದನ್ನು ತನಿಖೆ ಮಾಡುವುದಕ್ಕೆ, ಹಿಡಿಯುವುದಕ್ಕೆ ಎಷ್ಟು ಸಿಬ್ಬಂದಿ ನೇಮಕ ಮಾಡಿದ್ದೀರಿ? ತನಿಖಾ ದಳ ಯಾವುದು? ಅದಕ್ಕೆ ಆದ ಖರ್ಚುಗಳು ಎಷ್ಟು, ಇದರ ವಿವರ ಬೇಕು. ಇದನ್ನು ನಾನು ತಮ್ಮ ಮೂಲಕ ಅವರನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ತಾವು ವಿಷಯ ಪ್ರಸ್ತಾಪ ಮಾಡಿದ್ದೀರಿ. ಅಷ್ಟೆಲ್ಲ ಮಾಹಿತಿ ತಕ್ಷಣಕ್ಕೆ ಎಲ್ಲಿ ಸಿಗುತ್ತದೆ? ನಾನು ಅದನ್ನು ತರಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅರಣ್ಯ ಸಚಿವರು ಇಲ್ಲೇ ಇದ್ದಾರೆ. ಅವರು ಉತ್ತರ ಹೇಳುವುದಕ್ಕೆ ತಯಾರಿದ್ದಾರೆ.

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್‌ನಾಗರಾಜು ಅವರು ಎತ್ತಿದ ವಿಷಯ ಹೆಬ್ಬಾವು ಸಲುವಾಗಿ. ಆ ಸದನದಲ್ಲಿ ಕೂಡ ಈ ವಿಷಯವನ್ನು ಎತ್ತಿದ್ದರು. ಅದಕ್ಕಾಗಿ ಅಲ್ಲಿ ಉತ್ತರವನ್ನು ಹೇಳಿದೆ. ಆದುದರಿಂದ ಇಲ್ಲಿ ಹಕ್ಕುಚ್ಯುತಿ ಪ್ರಶ್ನೆ ಬರುವುದಿಲ್ಲ. ಅಲ್ಲಿ ಅವರು ಎತ್ತಿದ್ದರು ಅದಕ್ಕೆ ಉತ್ತರ ಹೇಳಿದ್ದಾಗಿದೆ. ಹೆಬ್ಬಾವನ್ನು ಹೊರಗಿನಿಂದ ತರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ 250ಎಕರೆ ಜಮೀನು ಇದೆ, ಗಿಡಗಳು ಇವೆ. ಅಲ್ಲಿ ಹೆಬ್ಬಾವು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಹೆಬ್ಬಾವನ್ನು ಹೊರಗಿನಿಂದ ತರುವುದಕ್ಕೆ ಸಾಧ್ಯವಿಲ್ಲ. ಅದೇ ಅಲ್ಲೇ ಇದೆ, ಅಲ್ಲಿ ಇರಬೇಕು. ಅದನ್ನು ಸಹ ಹುಡುಕಿಸುತ್ತೇನೆ. ಹೆಬ್ಬಾವು ಹೊರಗಿನಿಂದ ತಂದದ್ದು ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಹೊರಗಿನಿಂದ ತಂದಿಲ್ಲವೆಂದು ಇವರು ಹೇಳತಕ್ಕದ್ದು ಸರಿಯಲ್ಲ. ವೀರಪ್ಪನ್ ಅನ್ನು ಹಿಡಿಯುವುದಕ್ಕೆ ಆಗದಿದ್ದರೆ ಹೆಬ್ಬಾವನ್ನಾದರೂ ಹಿಡಿದರಲ್ಲ. ಅದು ನಿಮಗೆ ಉಸಿರು ಬಿಟ್ಟ ಹಾಗೆ. ನಾನು ಈಗಲೇ ಒತ್ತಾಯ ಮಾಡುವುದಿಲ್ಲ. ಈ ಸಭೆ ಮುಗಿಯುವುದರೊಳಗಾಗಿ ತನಿಖೆ ಮಾಡಿಸುತ್ತೀರಾ ಸ್ವಾಮಿ?

ಶ್ರೀ ಹೆಚ್.ವೈ. ಮೇಟಿ : ತನಿಖೆ ಮಾಡಿಸೋಣ.

ಕೋಲಾರ ಜಿಲ್ಲೆಯಲ್ಲಿ ಕುಡಿಯವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ

SRI RAJENDRAN (K.G.F) : Sri, I thank you for having given me an opportunity to speak about the problems of Kolar Gold Field and kolar district. The hon. Members have spoken about the problems of almost each and evary district. However, many hon. Members who are here from Kolar have not spoken about the problems of the district. I think they could have explained the problems of Kolar better than me. Sir, Satellite pictures show that Kolar has become dry and dark area.

MR. SPEAKER : what is the problem?

SRI S. RAJENDRAN sir, there is acute problem water in Kolar and in my constituency. Totally it has become dry area. The Government has not done anything for supply of drinking water. There is growing unemployment. The attrocities are incrasing and there is no law and order. in KGF.

MR.SPEAKER : That we can take it up later. This is Zero Hour. You can mention some specific important matter of public importance. Since I had not given an opportunity I permitted you to speak during the Zero Hour. you kindly restrict to the problem of drinking water. You will have enough opportunities subsequently to raise the other issues. Kindly co-operate with me.

ಶ್ರೀ ಡಿ. ಮಂಜುನಾಥ : ಈಗಾಗಲೇ ಜಿಲ್ಲಾಧಿಕಾರಿಗಳಿಗೆ ನಾವು ಹಣ ಬಿಡುಗಡೆ ಮಾಡಿದ್ದೇನೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ವಹಿಸಿದ್ದೇವೆ.

ಅಧ್ಯಕ್ಷರು : ಸ್ಟೀರಿಯೋ ಟೈಪ್ ಆನ್ಸರ್‌ಬೇಡ. ಅಲ್ಲಿ ಸ್ಯಾಟಲೈಟ್ ಪಿಕ್ಚರ್ ಕೂಡ ತೋರಿಸುತ್ತದೆ. ಅಂದರೆ ಗ್ರಾಂಡ್ ವಾಟರ್ ಇಲ್ಲ ಬಹಳ ತೀವ್ರವಾದ ಸಮಸ್ಯೆ ಇದೆ ಎಂದು ಹೇಳುತ್ತಾರೆ. ಪಕ್ಕದಲ್ಲಿ ಬಂಗಾರಪೇಟೆಯ ಬೇತಮಂಗಲ ಕರೆಯಿಂದ ಏನಾದರೂ ವ್ಯವಸ್ಥೆ ಮಾಡುತ್ತೀರಾ ಎಂಬುದನ್ನು ಆಲೋಚನೆ ಮಾಡಿ ಹೇಳಬೇಕಾಗುತ್ತದೆ. ಅದು ಎರಡು ಲಕ್ಷ ಜನ ಸಂಖ್ಯೆ ಇರತಕ್ಕ ಜಾಗ. ಅಲ್ಲ ಎಲ್ಲ ಕಾರ್ಮಿಕರು ಇದ್ದಾರೆ. ಪಾಪ,ಸದಸ್ಯರು ಹೊಸಬರು ಇದ್ದಾರೆ ಅವರಿಗೆ ಸರಿಯಾಗಿ ಹೇಳುವುದಕ್ಕಾಗಲಿಲ್ಲ. ಕುಡಿಯುವ ನೀರಿನ ವ್ಯವಸ್ಥೆಗೆ ನೀವು ತಕ್ಷಣ ನೀವು ಅಲ್ಲಿಗೆ ಗಮನ ಹರಿಸಬೇಕು. D.C.ಯವರಿಗೆ ಹಣ ಕೊಟ್ಟಿದ್ದೇವೆಂದು ಹೇಳುವುದು ಉತ್ತರ ಸರಿಯಲ್ಲ. ದಯಮಾಡಿ on war footing you please attend to that work

ಶ್ರೀ ಡಿ. ಮಂಜುನಾಥ : ಆಯಿತು ಸ್ವಾಮಿ, ಅದನ್ನು ಮಾಡುತ್ತೇವೆ.

ಕೋರಮಂಗಲದ ಈಜಿಪುರಂ ಸ್ಲಂನಲ್ಲಿ 300 ಗುಡಿಸಲು ಸುಟ್ಟು ಹೋಗಿರುವ ಬಗ್ಗೆ

ಶ್ರೀ ಎಂ. ಶ್ರೀನಿವಾಸ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಕೋರಮಂಗಲ ಈಜಿಪುರ ಸ್ಲಂನಲ್ಲಿ ಮೊನ್ನೆ ಶುಕ್ರವಾರ ಆದಂಥ ಬೆಂಕಿ ಅನಾಹುತದಲ್ಲಿ 300 ಗುಡಿಸಲುಗಳು ಸುಟ್ಟುಹೋಗಿವೆ. ಸುಟ್ಟು ಹೋದಾಗ ರಾತ್ರಿ ಹತ್ತು ಗಂಟೆಗೆ ಫೈರ್ ಫೋನ್ ಮಾಡಿದ್ದೆ. ಜಿಲ್ಲಾಧಿಕಾರಿಗಳು ಬಂದಿದ್ದರು. ಅಲ್ಲಿ ಏನಾಗಿದೆ ಎಂದರೆ ಸುಟ್ಟು ಹೋದ ಮೇಲೆ ಅಲ್ಲಿ ಅವರುಗಳಿಗೆ ಊಟದ ವ್ಯವಸ್ಥೆಗೆ ಮತ್ತೊಂದಕ್ಕಾಗಲಿ ಯಾವುದೇ ಒಂದು ಇಂಡಿವಿಜ್ಯುಯಲ್ ಆದ ಸಂಘ ಸಂಸ್ಥೆಗೆ ಕೊಟ್ಟಿದ್ದಾರೆ. ಆದರೆ ಅಲ್ಲಿ ಯಾವುದೇ ರೀತಿಯ ಸಹಾಯ ಅವರಿಗೆ ಆಗಲಿಲ್ಲ. ಅಲ್ಲಿರತಕ್ಕ ದಲಿತರು ಮತ್ತು ಬೇರೆಯವರು ಅಲ್ಲಿಗೆ ಬಂದಂತವರಿಗೆ ಅನುಕೂಲವಾಯಿತು. ಆದಾದಮೇಲೆ ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ನಾವು ಬೇರೆ ಕಡೆ ಷಿಫ್ಟ್ ಮಾಡುವುದಿಲ್ಲ. ರಾಷ್ಟ್ರೀಯ ಕ್ರೀಡಾಂಗಣಕ್ಕೆ ಬೇಕಾದ ಮನೆಗಳನ್ನು ಕಟ್ಟುವಾಗಲೂ ಕೂಡ ಬೇರೆ ಕಡೆ ಷಿಫ್ಟ್ ಮಾಡುವುದಿಲ್ಲವೆಂದು ಸದನದಲ್ಲಿ ಹೇಳಿದ್ದರು. ಆ ಭಾಗದಲ್ಲಿ ಮೊದಲು ಸುಟ್ಟು ಹೋದವರಿಗೆ ಮನೆ ಕಟ್ಟಿಕೊಡುತ್ತೇವೆಂಬ ಮಾತನ್ನು ಹೇಳಿದ್ದರು. ಆದರೆ ಬೇರೆ ಕಡೆ ಷಿಫ್ಟ್ ಮಾಡುವುದಿಲ್ಲ ಅಂದಮೇಲೆ ಜಿಲ್ಲಾಧಿಕಾರಿಗಳು ಹೋಗಿ, ಸುಟ್ಟು ಹೋಗುವುದಕ್ಕೆ 15 ದಿನಗಳಿಗೆ ಮೊದಲೇ ಅವರಿಗೆ ಗುರುತಿನ ಚೀಟಿ ಕೊಟ್ಟಿದ್ದಾರೆ ಮತ್ತು ನಿಮಗೆ ಬೇರೆ ಕಡೆ ಸ್ಥಳಾವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿಗೆ